# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***Spl.C.No.29/2021***

PW.2
CW.2

ದಿನಾಂಕಃ 20-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಹೆಸರುಃ ದಯಾನಂದ
ತಂದೆಯ ಹೆಸರುಃ ರಾಣೋಜಿರಾವ್
ವಯಸ್ಸುಃ 55 ವರ್ಷ
ವೃತ್ತಿಃ ಟೈಲರ್
ವಾಸಸ್ಥಳಃ ಕಲ್ಲೂರು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ಗೊತ್ತು. ಅವರು ನನ್ನ ಬಾಡಿಗೆ ಮನೆಯ ಮಾಲೀಕರು. ಚಾಸಾಃ 3 ನಮ್ಮ ಮನೆಯ ಪಕ್ಕದ ಕಟ್ಟಡದ ಮಾಲೀಕರು. ಚಾಸಾಃ 4 ರಿಂದ 7 ಗೊತ್ತಿಲ್ಲ. ಚಾಸಾಃ 8 ಮೃತರ ತಾಯಿಯನ್ನು ಮೃತರ ಮನೆಗೆ ಬರುವಾಗ ಕೆಲವು ಬಾರಿ ನೋಡಿದ್ದೆ. ಚಾಸಾಃ 9 ರಿಂದ 12 ಗೊತ್ತಿಲ್ಲ. ಮೃತ ಅಂಜಲಿ ಗೊತ್ತು. ನಾನು ವಾಸ ಮಾಡುವ ಬಾಡಿಗೆ ಮನೆಯ ಕಟ್ಟದಲ್ಲಿ ಮೃತ ಅಂಜಲಿ ಸಹ ಬಾಡಿಗೆದಾರರಾಗಿ ವಾಸ ಮಾಡುತ್ತಿದ್ದರು. ಈಗ ಆಕೆ ಮೃತರಾಗಿರುತ್ತಾರೆ. ಚಾಸಾಃ 1 ರವರ ಡಿ.ಎಂ.ಪಾಳ್ಯದಲ್ಲಿರುವ ಕಟ್ಟಡದಲ್ಲಿ ಮೃತರು ವಾಸವಾಗಿದ್ದರು. ನಾನು ಜನವರಿ 2013 ರಿಂದ 4-10-2020 ರವರೆಗೆ ಚಾಸಾಃ 1 ರವರ ಮನೆಯಲ್ಲಿ ಬಾಡಿಗೆದಾರನಾಗಿ ವಾಸವಾಗಿದ್ದೆ. ನಾನು ಟೈಲರಿಂಗ್ ಕೆಲಸ ಮಾಡುತ್ತೇನೆ.

2. ನನ್ನ  ಬಾಡಿಗೆ ಮನೆಯ ಎದುರುಬಾಗದಲ್ಲಿ ಆಕೆ ವಾಸವಾಗಿದ್ದರು. ನಮ್ಮಿಬ್ಬರ ಮನೆಯ ಬಾಗಿಲುಗಳು ಉತ್ತರಾಬಿಮುಖವಾಗಿದ್ದವು. ಆಕೆ ಮೃತರಾಗುವ 2 ವರ್ಷಗಳ ಮೊದಲಿನಿಂದಲೂ ಬಾಡಿಗೆ ಕಟ್ಟಡದಲ್ಲಿ ಬಾಡಿಗೆದಾರರಾಗಿ ವಾಸವಾಗಿದ್ದರು. ಆಕೆ ಯಾವುದೋ ಅಂಗಡಿಯಲ್ಲಿ ಸೇಲ್ಸ್ ಗರ್ಲ್ ಅಗಿ ಕೆಲಸ ಮಾಡುತ್ತಿರುವುದಾಗಿ ಹೇಳುತ್ತಿದ್ದರು. ಆಕೆ ನನ್ನೊಂದಿಗೆ ಉತ್ತಮ ಬಾಂಧವ್ಯದಲ್ಲಿ ಇದ್ದರು. ಅಕೆ ನನ್ನ ಬಳಿ ಬಟ್ಟೆ ಹೊಲಿಯಲು ಕೊಡುತ್ತಿದ್ದರು. ನಾನು ಟೈಲರಿಂಗ್ ಗೆ ಬೇಕಾದ ವಸ್ತುಗಳನ್ನು ಮತ್ತು ಮನೆಗೆ ಬೇಕಾದ ಹೂ ಹಣ್ಣುಗಳನ್ನು ತರಿಸುತ್ತಿದ್ದೆ. ಆದಕ್ಕೆ ಹಣವನ್ನೂ ಸಹ ಕೊಡುತ್ತಿದ್ದೆ.  ಅಕೆಗೆ ಫೋನ್ ಮೂಲಕ ನಾನು ಬೇಕಾದ ವಸ್ತುಗಳನ್ನು ತರಿಸುತ್ತಿದ್ದೆ. ಈಗ ನನಗೆ ಆಕೆಯ ಫೋನ್ ನಂಬರ್ ಮರೆತುಹೋಗಿದೆ. ಅಕೆಯ ಎರಡು ಫೋನ್ ನಂಬರ್ ಗಳಿಗೆ ನಾನು ಫೋನ್ ಮಾಡುತ್ತಿದ್ದೆ. 8147618929 ನನ್ನ ಮೊಬೈಲ್ ಸಂಖ್ಯೆ ಎರಡು ವರ್ಷಗಳಾಗಿರುವ ಕಾರಣ ನನಗೆ ಮೃತರ ಮೊಬೈಲ್ ಸಂಖ್ಯೆ ಅಥವಾ ಕೊನೆಯ 4 ಅಥವಾ 3 ಸಂಖ್ಯೆ ಹೇಳಲು ಸಾಧ್ಯವಿಲ್ಲ.

3. ದಿನಾಂಕಃ 21-8-2020 ರಂದು ಶುಕ್ರವಾರ  ಗೌರಿಹಬ್ಬ ಇದ್ದ ಕಾರಣ  ಮಾರನೇ ದಿನ ಗಣೇಶ ಹಬ್ಬ ಇದ್ದ ಕಾರಣ ಹಣ್ಣು ಹಂಪಲುಗಳನ್ನು ತರುವಂತೆ ನಾನು ಮೃತ ಅಂಜಲಿಗೆ ತಿಳಿಸಿದ್ದೆ. ರಾತ್ರಿ 9 ರಿಂದ 9-30 ರ ಸಮಯದಲ್ಲಿ ಆಕೆ ನಮ್ಮ ಮನೆಗೆ ಬಂದು ವಸ್ತುಗಳನ್ನು ನೀಡಿ ಹಣ ಪಡೆದು ಹೋದರು, ಮಾರನೇ ದಿನ ಗಣೇಶ ಹಬ್ಬ ಇದ್ದ ಕಾರಣ ಅಕೆಗೆ ಮನೆಗೆ ಬರುವಂತೆ  ಕರೆಯಲು ಫೋನ್ ಮಾಡಿದೆ. ಆದರೆ ಅಕೆಯ ಫೋನ್ ರಿಂಗ್ ಅಗುತ್ತಿತ್ತು. ಅಕೆ ಕರೆ ಸ್ವೀಕರಿಸಿರಲಿಲ್ಲ. ಮತ್ತೆ 23-8-2020 ಬಾನುವಾರ ಸಹ ಅಕೆಗೆ ಫೋನ್ ಮಾಡಿದೆ. ಅಕೆ ಕರೆ

ಸ್ವೀಕರಿಸಲಿಲ್ಲ. ನಂತರ ನನಗೆ ಅನುಮಾನ ಬಂದು ಅಕೆಯ ಮನೆಯ ಬಳಿಗೆ ಹೋದೆ. ಆಕೆಯ ಮನೆ ಬಾಗಿಲು ಸ್ವಲ್ಪ ತೆರೆದಿತ್ತು. ನಾನು ಬೆರಳಿನಿಂದ ಬಾಗಿಲು ತಳ್ಳಿದೆ. ಆಗ ಮನೆಯ ಒಳಬಾಗದಿಂದ ಕೆಟ್ಟ ವಾಸನೆ ಬಂತು. ನಾನು ಕೂಡಲೇ ವಾಪಸ್ಸು ನನ್ನ ಮನೆಯ ಬಳಿ ಹೋಗಿ ಮನೆಯ ಮಾಲೀಕರಿಗೆ ಸಂಜೆ 6-30 ರಿಂದ 7 ಗಂಟೆ ಸಮಯದಲ್ಲಿ ಫೋನ್ ಮಾಡಿ ತಿಳಿಸಿದೆ. ನಾನು ಅಕೆಯ ಮನೆಯ ಒಳಬಾಗದಲ್ಲಿ ನೋಡಲಿಲ್ಲ. ಕೆಟ್ಟ ವಾಸನೆ ಬಂದ ಕಾರಣ ಅಕೆ ಕೊಲೆಯಾಗಿರಬಹುದು ಎಂದು ಅನ್ನಿಸಿತು. ನನಗೆ ಹೃದಯಸಂಬಂದಿ ಕಾಯಿಲೆ ಇರುವುದರಿಂದ ಮನೆಯ ಒಳಬಾಗಕ್ಕೆ ಹೋಗಿ ನೋಡಲಿಲ್ಲ. ನಾನು ಮನೆಯ ಮಾಲೀಕರಿಗೆ ಕೆಟ್ಟ ವಾಸನೆ ಬರುತ್ತಿರುವುದಾಗಿ ತಿಳಿಸಿದೆ. ನಾನು ಮೃತ ಅಂಜಲಿಗೆ ಹಣ ಕೊಟ್ಟ ನಂತರ ಯಾವುದೇ ವ್ಯಕ್ತಿಗಳನ್ನು ಅಥವಾ ಯಾವುದೇ ಘಟನೆಯನ್ನು ನಮ್ಮ ಮನೆಯ ಬಳಿ ನೋಡಿರಲಿಲ್ಲ. ಮೃತ ಅಂಜಲಿ ಕೊಲೆಯಾದ ದಿನ ಯವುದೇ ವ್ಯಕ್ತಿಗಳು ವಾಹನದಲ್ಲಿ ನಾನು ವಾಸವಾಗಿದ್ದ ಮನೆಯ ಬಳಿ ಬಂದಿದ್ದರು ನಾನು ಅವರನ್ನು ನೋಡಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನಾನು ಮೃತ ಅಂಜಲಿಯ ಮನೆಯ ಒಳಬಾಗದಲ್ಲಿ ಕೊಲೆಯಾಗಿದ್ದನ್ನು ನಾನು ಕಣ್ಣಾರೆ ನೋಡಿಲ್ಲ ಅಕೆಯ ಮೃತ ದೇಹವನ್ನು ಮನೆಯ ಒಳಬಾಗದಲ್ಲಿ ನೋಡಿಲ್ಲ. ಅಕೆಯ ಕೊಲೆಯಾಗಿರಬಹುದು ಎಂದು ಮನೆಯಮಾಲೀಕರಿಗೆ ತಿಳಿಸಿದೆ. ಮೃತದೇಹವನ್ನು ಅಕೆಯಮನೆಯ ಒಳಬಾಗದಲ್ಲಿ ನೋಡಿದ್ದೆ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ನನ್ನನ್ನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಪೊಲೀಸರು ವಿಚಾರಣೆ ಮಾಡಿದ್ದಾರೆ. ನಾನು ಘಟನೆಗೆ ಸಂಬಂದಿಸಿದಂತೆ ಕಂಡ ಮತ್ತು ಕೇಳಿದ ವಿಚಾರವನ್ನು ಮಾತ್ರ ಹೇಳಿದ್ದೇನೆ.

4. ಮೃತ ಅಂಜಲಿಯ ಕೊಲೆಯಾದ ಎರಡು ವಾರಗಳ ನಂತರ ಪೊಲೀಸರು ತಮ್ಮ ಇಲಾಖಾ ವಾಹನದಲ್ಲಿ ಕೆಲವರನ್ನು ಕರೆದುಕೊಂಡು ಬಂದಿದ್ದರು. ಆ ಹುಡುಗರನ್ನು ಮೃತ ಅಂಜಲಿ ಮನೆಗೆ ಕರೆದುಕೊಂಡು ಹೋಗಿದ್ದು ನಂತರ ಇಲಾಖಾ ಜೀಪಿನಲ್ಲಿ ಕೂರಿಸಿದ್ದರು, ಅವರೆಲ್ಲರೂ ಜೀಪಿನಲ್ಲಿ ಕುಳಿತಿದ್ದಾಗ ಪೊಲೀಸರು ನನ್ನನ್ನು ಜೀಪಿನ ಬಳಿ ಕರೆದು ಇದೇ ಹುಡುಗರು ಅಂಜಲಿಯನ್ನು ಕೊಲೆ ಮಾಡಿದ್ದು ಎಂದು ತಿಳಿಸಿದರು. ನಾನು ಹುಡುಗರನ್ನು ನೋಡಿದಾಗ ಅವರೆಲ್ಲರೂ ಮುಖಕ್ಕೆ ಮಾಸ್ಸ್ ಧರಿಸಿದ್ದರು. ಸದರಿ ಹುಡುಗರನ್ನು ನನಗೆ ನಿಖರವಾಗಿ ನೋಡಿ ಗುರುತಿಸಲು ಸಾಧ್ಯವಾಗಲಿಲ್ಲ. ಪೋಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರಲಿಲ್ಲ. ನಾನು ಯಾವುದೇ ಸ್ಥಳದಲ್ಲಿ ಆ ಹುಡುಗರನ್ನು ಗುರುತಿಸಲಿಲ್ಲ. ಮೃತ ಅಂಜಲಿಯ ಕೊಲೆಯಾಗಿದೆ ಎಂದು ನಂತರ ನನಗೆ ತಿಳಿಯಿತು. ನಾನು ಈಗ ನೋಡುತ್ತಿರುವ ನಿಪಿ.3 ರಿಂದ 8 ಪೋಟೋದಲ್ಲಿ ಕಂಡು ಬರುತ್ತಿರುವ ದೃಶ್ಯಗಳನ್ನು ಮೃತ ಅಂಜಲಿಯ ಮನೆಯಲ್ಲಿ ನೋಡಿರಲಿಲ್ಲ. ಸಾಕ್ಷಿ ಮುಂದುವರಿದು ನಾನು ಅಕೆಯ ಮನೆಯ ಒಳಬಾಗಕ್ಕೆ ಹೋಗಿರಲಿಲ್ಲ ಎಂದು ನುಡಿಯುತ್ತಾರೆ. ನಿಪಿ.11 ಮತ್ತು 12 ಅಂಜಲಿ ಮನೆಯ ಹಿಂಬಾಗದ ಸ್ಥಳ ಎಂದು ಸಾಕ್ಷಿ ಪೋಟೋ ನೋಡಿ ಗುರುತಿಸಿರುತ್ತಾರೆ. ನಿಪಿ.11 ಮತ್ತು 12 ಪೋಟೋದಲ್ಲಿ ಕಂಡುಬರುವ ಮಾಸ್ಸ್ ಧರಿಸಿರುವ ಹುಡುಗರನ್ನು ನಾನು ಜೀಪಿನಲ್ಲಿ ನೋಡಿದ್ದೆ. ಅದರೆ ನನಗೆ ಅವರನ್ನು ಈಗ ಗುರುತಿಸಲು ಸಾಧ್ಯವಿಲ್ಲ. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಇಬ್ಬರು ಅರೋಪಿಗಳು ಮತ್ತು ವಿಸಿ ಮೂಲಕ ಹಾಜರುಪಡಿಸಿರುವ ಮೂವರು ಅರೋಪಿಗಳನ್ನು ನಾನು ಆ ದಿನ ಮಾಸ್ಕ್ ಧರಿಸಿದ್ದ ವ್ಯಕ್ತಿಗಳೋ ಅಲ್ಲವೋ ಎಂದು ಹೇಳಲು ಸಾಧ್ಯವಿಲ್ಲ. ಪೋಟೋದಲ್ಲಿ ಕಂಡುಬರುವ

ವ್ಯಕ್ತಿಗಳನ್ನು ಪೊಲೀಸರು ನನಗೆ ಜೀಪಿನಲ್ಲಿ ತೋರಿಸಿದ್ದರು. ಜೀಪಿನಲ್ಲಿದ್ದ ವ್ಯಕ್ತಿಗಳನ್ನು ಬೇರೆ ಎಲ್ಲೂ ನನಗೆ ತೋರಿಸಿರಲಿಲ್ಲ. ಅರೋಪಿಗಳನ್ನು ನನಗೆ ಬೇರೆ ಸ್ಥಳದಲ್ಲಿ ತೋರಿಸಿದ್ದರು ಎಂದು ಹೇಳಿಕೆ ಕೊಟ್ಟಿಲ್ಲ. ಪೋಟೋದಲ್ಲಿ ಕಂಡುಬರುವ ಸ್ವಿಫ್ಟ್ ರಿಸೈರ್ ಕಾರನ್ನು ನಾನು ನಮ್ಮ ಮನೆಯ ಮುಂದೆ ನೋಡಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ನಡೆಸಲು ಅಬಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)*

**ಪಾಟೀ ಸವಾಲುಃ ಸರ್ಕಾರಿ ಅಬಿಯೋಜಕರಿಂದ**

5. ದಿನಾಂಕಃ 21-8-2020 ರಂದು ರಾತ್ರಿ 11 ಗಂಟೆ ಸಮಯದಲ್ಲಿ ನಮ್ಮ ಮನೆಯ ಮುಂಬಾಗದಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದಾಗ 4-5 ಜನ ಹುಡುಗರು ಸ್ವಿಫ್ಟ್ ಡಿಸೈರ್ ಕಾರಿನಲ್ಲಿ ಬಂದು ಕಾರನ್ನು ನಿಲ್ಲಿಸಿ ಕೆಳಗೆ ಇಳಿದಿದ್ದನ್ನು ನಾನು ಕಣ್ಣಾರೆ ನೋಡಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಕಾರನ್ನು ನೋಡಿದ್ದೆ ಅದು ಸ್ವಿಫ್ಟ ಡಿಸೈರ ಕಾರು ಎಂದು ಹೇಳಿದ್ದೆ ಎಂದರೆ ಸರಿಯಲ್ಲ. 5 ಜನರು ಮರದಡಿ ನಿಂತು ಮಾತನಾಡುತ್ತಿದ್ದುದನ್ನು ನಾನು ನೋಡಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನು ಹಲವಾರು ಬಾರಿ 22-8-2020 ರಂದು ಮೃತರಿಗೆ ಪೋನ್ ಕರೆ ಮಾಡಿದಾಗ ಮೊಬೈಲ್ ಸ್ವಿಚ್ ಅಫ್ ಅಗಿತ್ತು ಎಂದು ಪೊಲೀಸರಿಗೆ ತಿಳಿಸಿದ್ದೆ ಎಂದರೆ ಸರಿ. ದಿನಾಂಕಃ 23-8-2020 ರಂದು ಸಂಜೆ ಮೃತ ಅಂಜಲಿ ಮನೆ ಬಳಿ ಹೋಗಿ ನೋಡಿದಾಗ ಅಕೆಯ ಮನೆಯ ಕಿಟಕಿ ತೆಗೆದಿದ್ದು ಬೀರುವಿನ ಬಾಗಿಲು ತೆಗೆದಿದ್ದು ಅದರಲ್ಲಿನ ಬಟ್ಟೆಗಳು

ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು ಕಂಡುಬಂತು. ಮನೆಯಬಾಗಿಲು ತಳ್ಳಿದಾಗ ಮೃತ ಅಂಜಲಿಯ ದೇಹ ಓಣಿಯಲ್ಲಿ ಅಂಗಾತವಾಗಿ ಬಿದ್ದು ಮುಖ ಮತ್ತು ಕೈಗಳು ಕೊಳೆತಿದ್ದು ನೀಚರಕ್ತ ಹೊರಬರುತ್ತಿತ್ತು. ನನಗೆ ಗಾಬರಿಯಾಗಿ ಹೊರಬಂದು ನಂತರ ಚಾಸಾಃ 1 ರವರಿಗೆ ಫೋನ್ ಮಾಡಿದ್ದೆ ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಚಾಸಾಃ 1 ರವರಿಗೆ ಫೋನ್ ಮೂಲಕ ಮೇಲೆ ಹೇಳಿದ ಎಲ್ಲಾ ವಿಚಾರವನ್ನು ತಿಳಿಸಿದ್ದೆ ಎಂದರೆ ಸರಿಯಲ್ಲ.

6. ದಿನಾಂಕಃ 22-8-2020 ರಂದು ರಾತ್ರಿ 11-30 ಕ್ಕೆ ಸ್ವಿಫ್ಟ್ ಡಿಸೈರ್ ಕಾರಿನಲ್ಲ ಬಂದಿದ್ದ ಅಸಾಮಿಗಳೇ ಅಕೆಯನ್ನು ಕೊಲೆ ಮಾಡಿರಬಹುದು ಎಂದು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯ ಬಾಗವನ್ನು ನಿಪಿ.13 ಎಂದು ಗುರುತಿಸಲಾಯಿತು.

7. ದಿನಾಂಕಃ 30-8-2020 ರಂದು ನನ್ನನ್ನು ತುಮಕೂರು ನಗರ ಠಾಣೆಯ ವೃತ್ತ ನಿರೀಕ್ಷಕರ ಕಚೇರಿಗೆ ಕರೆಸಿದ್ದರು ಎಂದರೆ ಸರಿ. ನಾನು ಮತ್ತು ವೆಂಕಟೇಶ ಇಬ್ಬರೂ ಅವರ ಕಚೇರಿಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ನಾನು ಮಾತ್ರ ಹೋಗಿದ್ದೆ ಎಂದು ನುಡಿಯುತ್ತಾರೆ. ವಿಸಿ ಮೂಲಕ ಹಾಜರುಪಡಿಸಿರುವ ಮೂವರು ಅರೋಪಿಗಳು ಹಾಗೂ ನ್ಯಾಯಾಲಯದ ಮುಂದೆ ಹಾಜರಿರುವ ಇಬ್ಬರು ಅರೋಪಿಗಳನ್ನು ನನಗೆ ತೋರಿಸಿ ಅವರ ಹೆಸರು ಮತ್ತು ವಿಳಾಸ ತಿಳಿಸಿ ಇವರೇ ಅಂಜಲಿರವರನ್ನು ಕೊಲೆ ಮಾಡಿದ ವ್ಯಕ್ತಿಗಳು ಎಂದು ನನಗೆ ತೋರಿಸಿ ಹೇಳಿದ್ದರು ಎಂದರೆ ಸರಿಯಲ್ಲ. ಎಲ್ಲಾ ಅರೋಪಿಗಳು ಮೃತ ಅಂಜಲಿಯನ್ನು

ಕೊಲೆ ಮಾಡಿ ಅಕೆಯ ಮನೆಯಲ್ಲಿದ್ದ 550 ರೂಪಾಯಿಗಳನ್ನು ಮತ್ತು ಒಂದು ಮೊಬೈಲನ್ನು ದೋಚಿಕೊಂಡು ಹೋಗಿದ್ದಾರೆ ಎಂದು ನನಗೆ ವೃತ್ತ ನಿರೀಕ್ಷಕರು ತಿಳಿಸಿದರು ಎಂದರೆ ಸರಿಯಲ್ಲ. ಅರೋಪಿಗಳು ಅಂಜಲಿ ಮನೆಯಬಳಿ ಬಂದಿದ್ದ ಸ್ವಿಪ್ಟ್ ಡಿಸೈರ್ ಕಾರು ಸಂಖ್ಯೆ ಕೆಎ-43 6083 ವಾಹನವನ್ನು ನನಗೆ ತೋರಿಸಿದರು ಎಂದರೆ ಸರಿಯಲ್ಲ. ಪೋಟೋದಲ್ಲಿ ಕಂಡುಬರುವ ಕಾರನ್ನೇ ನನಗೆ ಪೊಲೀಸರು ಠಾಣೆಯ ಬಳಿ ತೋರಿಸಿದ್ದು ಎಂದರೆ ಸರಿಯಲ್ಲ. ನಿಪಿ.11 ಮತ್ತು 12 ಪೋಟೋದಲ್ಲಿ ಕಂಡುಬರುವ ವ್ಯಕ್ತಿಗಳನ್ನು ನನಗೆ ಪೊಲೀಸರು ಪೊಲೀಸ್ ಠಾಣೆಯಲ್ಲಿ ತೋರಿಸಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಹಾಗೂ ವಿಸಿ ಮೂಲಕ ಹಾಜರುಪಡಿಸಿರುವ ಅರೋಪಿಗಳನ್ನು ವೃತ್ತ ನಿರೀಕ್ಷಕರ ಕಚೇರಿಯಲ್ಲಿ ನೋಡಿದ್ದೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅವರನ್ನು ನೋಡಿದರೆ ಗುರುತಿಸಬಲ್ಲೆ ಎಂದು ಸಹ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಬಾಗವನ್ನು ನಿಪಿ.14 ಎಂದು ಗುರುತಿಸಲಾಯಿತು. ನಾನು ಅಂಜಲಿ ಮನೆಯ ಒಳಬಾಗದ ಕೊಲೆಯಾದ ದೃಶ್ಯವನ್ನು ನೋಡಿದ್ದೆ ವೃತ್ತ ನಿರೀಕ್ಷಕರ ಕಚೇರಿಯಲ್ಲಿ 5 ಜನ ಅರೋಪಿಗಳನ್ನು ನೋಡಿದ್ದೆ ಎಂದರೆ ಸರಿಯಲ್ಲ. ಅರೋಪಿಗಳು ಬಂದಿದ್ದ ಕಾರನ್ನೂ ಸಹ ನೋಡಿ ಗುರುತಿಸಿದ್ದೆ ಎಂದರೆ ಸರಿಯಲ್ಲ. ನಿಪಿ.13 ಮತ್ತು 14 ರಂತೆ ಹೇಳಿಕೆ ಸಹ ನೀಡಿದ್ದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಅರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1** ಮತ್ತು **4** ನೇ ಅರೋಪಿಗಳ ಪರಃ ಶ್ರೀ.ಬಿ.ಕೆ.ಪಿ.ಎಸ್, ಶ್ರೀ.ಎಂ.ಸಿ.ಸಿ 3 ನೇ ಅರೋಪಿ ಪರ, ಶ್ರೀ.ಎನ್.ಎಂ ರವರು 2 ನೇ ಅರೋಪಿ ಪರ, ಶ್ರೀ.ಟಿ.ಓ.ಹೆಚ್ 5 ನೇ ಅರೋಪಿ ಪರ ವಕೀಲರಿಂದ

ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.